International Journal of Kannada Research 2015; 1(3): 22-26

International Journal of Kannada Research
www.kannadajournal.com

ISSN: 2454–5813
IJSR 2015; 1(3): 22-26
© 2015 IJKS
www.kannadajournal.com
Received: 06-10-2015
Accepted: 07-11-2015

**Dr. Nagendra Masuti**
Smt. Veeramma Gangasiri,
Degree College for Women,,
Kalaburagi - 02

Correspondence
**Dr. Nagendra Masuti**
Smt. Veeramma Gangasiri,
Degree College for Women,,
Kalaburagi - 02

# ಶಂಕರದಾಸಿಮಯ್ಯ:ಕಾಯ ಮತ್ತು ಮಾಯೆ

## Dr. Nagendra Masuti

ಬಸವಯುಗದ ವಚನದ ಆರಂಭದ ಬೀಜಗಳು ಹನ್ನೊಂದನೆಯ ಶತಮಾನದಲ್ಲಿ ಕಾಣಸಿಗುತ್ತವೆ. ಜೇಡರದಾಸಿಮಯ್ಯನಿಂದ ವಚನಸಾಹಿತ್ಯ, ಶರಣಧರ್ಮ, ವೀರಶೈವಧರ್ಮದ ಪುನರುಜ್ಜೀವನದ ಕಾರ್ಯ ಪ್ರಾರಂಭಗೊಂಡಿತು. ಜೇಡರದಾಸಿಮಯ್ಯ, ಕೊಂಡಗುಳಿ ಕೇಶಿರಾಜ, ಡೋಹರ ಕಕ್ಕಯ್ಯ, ಮಾದಾರ ಚನ್ನಯ್ಯ, ಕೆಂಭಾವಿ ಭೋಗಣ್ಣ, ತೆಲುಗು ಜೊಮ್ಮಣ್ಣ, ನಿಜಗುಣದೇವ, ಚಂದಿಮರಸ, ಸಕಲೇಶ ಮಾದರಸ ಹಾಗೂ ಶಂಕರದಾಸಿಮಯ್ಯ ಶರಣರು ವಚನಗಳ ರಚನೆಗೆ ತೊಡಗಿ, ವಚನ ಸಾಹಿತ್ಯಕ್ಕೆ ರೆಕ್ಕೆ – ಪುಕ್ಕಗಳು ಬಂದಿರುವ ಕಾಲ. ಇದೇ ಸಂದರ್ಭದಲ್ಲಿ ಬಾಳಿ ಬದುಕಿರುವ ಶಂಕರದಾಸಿಮಯ್ಯನ ಬದುಕು ಹಾಗೂ ವಚನಗಳನ್ನು ವಿಶ್ಲೇಷಿಸುವ ಉದ್ದೇಶ ಈ ಸಂಪ್ರಬಂಧದ್ದು.
ಶಂಕರದಾಸಿಮಯ್ಯನ ಕಾಲ ಸು.ಕ್ರಿ.ಶ. ೧೧೩೦. ಮೂಲತಃ ಶೈವಬ್ರಾಹ್ಮಣನಾಗಿದ್ದು, ಗೋವಿಂದದೇವನೆಂಬ ಪೂರ್ವನಾಮವನ್ನು ಹೊಂದಿದ್ದನು. ನವಿಲೆಯ ಜಡೆಯ ಶಂಕರಲಿಂಗದೇವರ ಅನುಗ್ರಹವಾದ ಮೇಲೆ ತನ್ನ ಹೆಸರನ್ನು ಶಂಕರದಾಸಿಮಯ್ಯನೆಂದು, ಉಮ್ಮವ್ವೆಯೆಂಬ ಹೆಂಡತಿಯ ಹೆಸರನ್ನು ಬದಲಿಸಿ ಶಿವದಾಸಿ ಎಂದು ಬದಲಾಯಿಸಿಕೊಂಡರು. ಇವರಿಗೊಬ್ಬ ಮಗ ಇದ್ದು, ಆತನ ಹೆಸರು ಸದ್ಯೋಜಾತ. ಶಂಕರದಾಸಿಮಯ್ಯನಹುಟ್ಟೂರು ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಸ್ಕಂದಶಿಲೆ(ಕಂದಗಲ್ಲು). ಈತನು ಬರೆದಿರುವ ಐದು ವಚನಗಳು ಲಭ್ಯ. ನಿಜಗುರು ಶಂಕರಲಿಂಗದೇವನೆಂಬುದು ವಚನಾಂಕಿತ.
ಶಂಕರದಾಸಿಮಯ್ಯನ ವಚನಗಳಲ್ಲಿ ನೇರನುಡಿಯಿದೆ. ಸಮಾಜದ ಕಪಟವೇಷದವರ ವಿಡಂಬನೆ, ಕಾಯ ಮತ್ತು ಮಾಯೆಯ ಸಂಬಂಧದ ಪರಿ, ಬಸವಣ್ಣನ ವ್ಯಕ್ತಿತ್ವದ ಅನಾವರಣಕ್ಕೆ ಸಂಬಂಧಪಟ್ಟ ವಚನಗಳು ಇಲ್ಲಿವೆ. ಒಟ್ಟು ಐದು ವಚನಗಳಲ್ಲಿ – ಎರಡು ಬಸವಣ್ಣನ ಹುಟ್ಟು, ಸಾಧನೆಗೆ ಸಂಬಂಧಿಸಿದ್ದರೆ, ಮತ್ತೆರಡು ವಚನಗಳು ಕಾಯವಿಕಾರ ಮತ್ತು ಮಾಯೆಯ ಪ್ರಭಾವಕ್ಕೆ ಸಂಬಂಧಪಟ್ಟಂತಹವು. ಉಳಿದ ಒಂದು ವಚನದಲ್ಲಿ ಸಮಾಜವನ್ನು ತರಾಟೆಗೆ ತೆಗೆದುಕೊಳ್ಳುತ್ತಾನೆ. ಹೀಗೆ ಕೆಲವೇ ವಚನಗಳಲ್ಲಿ ತನ್ನ ವ್ಯಕ್ತಿತ್ವದ ಛಾಪನ್ನು, ಅನುಭಾವವನ್ನು ಶಂಕರದಾಸಿಮಯ್ಯನು ಮೆರೆದಿದ್ದಾನೆ.
ಶಂಕರದಾಸಿಮಯ್ಯನ ಜೀವನದ ವಿವರಗಳು ಹಲವಾರು ಕಾವ್ಯಗಳಲ್ಲಿ ಸಿಗುತ್ತವೆ. ಹರಿಹರನು ಶಂಕರದಾಸಿಮಯ್ಯನ ರಗಳೆಯನ್ನು ಮೂರು ಸ್ಥಲಗಳಲ್ಲಿ ವಿವರಿಸಿದ್ದಾನೆ. ಅಲ್ಲದೆ ಪಾಲ್ಕುರಿಕೆ ಸೋಮನಾಥ(೧೨೫೦)ನ 'ಬಸವಪುರಾಣ'(ತೆಲುಗು), ಮಲ್ಲಿಕಾರ್ಜುನ ಕವಿಯ (೧೬೫೭) 'ಶಂಕರದಾಸಿಮಯ್ಯ ಪುರಾಣ', ವಿರುಪಾಕ್ಷ ಪಂಡಿತನ 'ಚನ್ನಬಸವ ಪುರಾಣ, ಲಕ್ಕಣದಂಡೇಶನ 'ಶಿವತತ್ವ ಚಿಂತಾಮಣಿ'ಯಲ್ಲಿಯೂ ಶಂಕರದಾಸಿಮಯ್ಯನ ಚರಿತ್ರೆಯ ಪುಟಗಳು ಸಿಗುತ್ತವೆ. ಶಂಕರದಾಸಿಮಯ್ಯನ ವಚನವೊಂದರಲ್ಲಿ ;

. . .     . . .  ನಿಮ್ಮ ಶರಣರ ಸಂಗದಿಂದ
ಎನ್ನ ನಂದಿಯ ಮೊಗವಾಡ, ನೊಸಲಕಣ್ಣುಂಟೆಂಬ
ಅಹಂಕಾರವ ಮುಂದುಗೊಂಡಿದ್ದೆನಯ್ಯ. ಎನ್ನ
ಮದ ಉಡುಗಿ, ಸಂಗನಬಸವಣ್ಣನ ಕರುಣದಿಂದ ಪ್ರಭುದೇವರೆಂಬ
ನಿರಾಳವ ಕಂಡು ಬದುಕಿದೆನು ಕಾಣಾ, ನಿಜಗುರು ಶಂಕರದೇವಾ
(ಸಮಗ್ರ ವಚನ ಸಂಪುಟ ೦೯, ಶಂಕರದಾಸಿಮಯ್ಯಗಳ ವಚನ ೦೫, ಸಂ: ಡಾ.ಬಿ.ಆರ್.ಹಿರೇಮಠ)

ತನಗೆ ನಂದಿಯ ಮುಖವಾಡ, ಹಣೆಗಣ್ಣು ಇರುವುದಾಗಿ ಹೇಳುತ್ತ, ಶರಣರ ಸಂಗದಿಂದ, ಕರುಣದಿಂದ ಅವುಗಳ ಇಲ್ಲವಾಗಿಸಿಕೊಂಡೆ ಎಂದು ಹೇಳುತ್ತಾನೆ. ನೊಸಲಗಣ್ಣಿನ ವಿವರಗಳನ್ನು ಹರಿಹರನು 'ಶಂಕರದಾಸಿಮಯ್ಯನ ರಗಳೆ'ಯಲ್ಲಿ ಪ್ರಸ್ತಾಪಿಸಿರುವನು. ಸೊಡ್ಡಳ ಬಾಚರಸ ತನ್ನ ವಚನದಲ್ಲಿ ಶಂಕರದಾಸಿಮಯ್ಯನನ್ನು ನೆನೆಯುತ್ತ ಅನೇಕ ಸಂಗತಿಗಳನ್ನು ಹೇಳುತ್ತಾನೆ.

ಘುಡುಘುಡಿಸಿ ಅನ್ಯದೈವಂಗಳ ಕೊಡೆವಿಡಿಸಿದನು
ಪಿಂಬೇರ ಮೈಲಿಗೆಯನು ಅಡಗಿಸಿದ ಭೋ.
ದೈವಂಗಳ ದರ್ಪವನು ಉಡುಗಿಸಿದ ಭೋ.
ಮುದನೂರ ದಾಸನ ತವನಿಧಿಯನು ಉರಿಗಣ್ಣ ಬಿಟ್ಟೊಮ್ಮೆ,
ಹರಿಯ ಪ್ರತಿಮೆಯನೊಡೆದಡಗಿಸಿದ ಭೋ.
ದೈವಂಗಳ ದರ್ಪವನು ಮನ್ನಣೆಯ ಮಾಡದೆ,
ಮಾರಿಯ ಕೈಯ ಮೊರಡಿಯ ಧ್ಯಾನಂಗಳ ಮಿಡಿಸಿದನು. ಓಂ
ನಮಃ ಶಿವಾಯ ಶಂಕರದಾಸ, ಪಂಚವದನ ಸೊಡ್ಡಳಾ (ಸ.ವ.ಸಂ:೦೯ ಸೊಡ್ಡಳಾ
ಬಾಚರಸನ ವಚನ ೩೫, ಸಂ: ಡಾ. ಬಿ.ಆರ್.ಹಿರೇಮಠ)

ಹಲವಾರು ಕಾರ್ಯಗಳಿಗೆ ಶಂಕರದಾಸಿಮಯ್ಯನು ಕಾರಣನಾದನು. ಜೇಡರದಾಸಿಮಯ್ಯನು ಶಿವನಿಂದ ಪಡೆದ ತವನಿಧಿಯಿಂದ ಬೀಗುತಿದ್ದನು. ಆತನ ಅಹಂಕಾರವನ್ನು ನಿರಶನ ಮಾಡಿದ್ದು ಹಾಗೂ ಆತನ ಹೆಂಡತಿಯ ಕೋರಿಕೆಯಂತೆ ಮರಳಿಸಿದ್ದು ನೆನೆಯಬಹುದು. ಕಲ್ಯಾಣದ ಜಯಸಿಂಹರಾಯನು ಸ್ಥಾಪಿಸಿದ್ದ ವಿಷ್ಣುವಿನ(ಹರಿ) ವಿಗ್ರಹವನ್ನು ಹಣೆಗಣ್ಣಿಂದ ಸುಟ್ಟುಹಾಕಿದ ಪ್ರಸಂಗವನ್ನು ಈ ವಚನ ಸಾರುತ್ತದೆ.
ಶಂಕರದಾಸಿಮಯ್ಯನನ್ನು ಅನೇಕ ಶರಣರು ತಮ್ಮ ವಚನಗಳಲ್ಲಿ ಸ್ಮರಿಸಿದ್ದಾರೆ. ಆತನ ಒಂದೊಂದು ಗುಣ – ಸ್ವಭಾವಗಳನ್ನು ದಾಖಲಿಸಲು ಪ್ರಯತ್ನಿಸಿದ್ದಾರೆ. ಆಯ್ದಕ್ಕಿ ಲಕ್ಕಮ್ಮ, ಉರಿಲಿಂಗಪೆದ್ದಿ, ಕುಷ್ಟಗಿ ಕರಿಬಸವೇಶ್ವರ, ಬಸವಲಿಂಗದೇವ, ಹಾವಿನಹಾಳಕಲ್ಲಯ್ಯರ ವಚನಗಳಲ್ಲಿ ನಮೂದಾಗಿರುವ ಶಂಕರದಾಸಿಮಯ್ಯನ ವ್ಯಕ್ತಿತ್ವ ಎಂತಹದ್ದು ಎಂಬುದನ್ನು ನೋಡಬಹುದು ;

ಆಯ್ದಕ್ಕಿ ಲಕ್ಕಮ್ಮ : 'ಶಂಕರದಾಸಿಮಯ್ಯನ ಪ್ರಸಾದವಕೊಂಡುಎನ್ನತನುಶುದ್ಧವಾಯಿತ್ತಯ್ಯ'
(ಸ.ವ.ಸಂ:೫,ಸಂ:ಡಾ.ವೀರಣ್ಣ ರಾಜೂರ)
ಉರಿಲಿಂಗಿಪೆದ್ದಿ : 'ಆಚಾರಕರ್ಪರವಳಿವಟ್ಟಿತ್ತು ಶಂಕರದಾಸಿಮಯ್ಯಗಳಿಗೆ'(ಸ.ವ.ಸಂ:೦೬, ಸಂ: ಡಾ.ಎಂ.ಎಂ.ಕಲಬುರ್ಗಿ)ಕುಷ್ಟಗಿ ಕರಿಬಸವೇಶ್ವರ
: 'ಶಂಕರದಾಸಿಮಯ್ಯಗೆ ಸುಂಕದ ಬಂಕಯ್ಯಗೆ . . . .'(ಸ.ವ.ಸಂ:೧೦, ಸಂ: ಡಾ.ವೀರಣ್ಣ ರಾಜೂರ)ಬಸವಲಿಂಗದೇವ :
'ಗುಹ್ಯ ಲಂಪಟಕ್ಕೆ ದೂರವಾದ ಮಹಾಘನ ಸದ್ಭಕ್ತ
ಶಿವಶರಣ ಶಂಕರದಾಸಿಮಯ್ಯನ ದಾಸಿಯ ದಾಸನ ಮಾಡಿ ಸಲಹಯ್ಯ'
(ಸ.ವ.ಸಂ. ೧೨, ಸಂ: ಡಾ.ವೀರಣ್ಣ ರಾಜೂರ)
ಹಾವಿನಹಾಳ ಕಲ್ಲಯ್ಯ : 'ಎನ್ನ ಕಕ್ಷೆಯಲ್ಲಿ ಸ್ವಾಯತನಾದನಯ್ಯ ಶಂಕರದಾಸಿಮಯ್ಯನು'
(ಸ.ವ.ಸಂ. ೦೯, ಸಂ: ಡಾ.ಬಿ.ಆರ್.ಹಿರೇಮಠ)

ಶಂಕರದಾಸಿಮಯ್ಯನ ಪ್ರಸಾದದ ಕುರಿತು ಆಯ್ದಕ್ಕಿ ಲಕ್ಕಮ್ಮ, ಆಚಾರದ ಬಗೆಗೆ ಉರಿಲಿಂಗಪೆದ್ದಿ, ಶರಣತ್ವದ ಕುರಿತು ಬಸವಲಿಂಗದೇವರು ಮಾತನಾಡುತ್ತಾರೆ. ಹಿರಿಯ ತಲೆಮಾರಿನ ಶರಣರ ಅನುಭವ, ಅನುಭಾವ ಪ್ರಪಂಚದ ವಿಸ್ತಾರವನ್ನು ನೆನೆಯುತ್ತ, ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡವರು ಶರಣರು.
ಶಂಕರದಾಸಿಮಯ್ಯನ ಲಭ್ಯವಾದ ಐದು ವಚನಗಳಲ್ಲಿಯ ಕಾಯ – ಮಾಯೆಯ ವಿಷಯ, ವಿಚಾರ, ತತ್ವ, ಸಿದ್ಧಾಂತಗಳನ್ನು ಪರಿಚಯಿಸುವುದು ಈ ಲೇಖನದ ಮಿತಿ.

ಪಠ್ಯ :
ಕಾಯದ ಮದವಳಿದಲ್ಲದೆ ಮಾಯಾವಿಕಾರವಳಿಯದು,
ಮಾಯಾವಿಕಾರವಳಿದಲ್ಲದೆ ಭವನಾಶವಾಗದು,
ಭವನಾಶವಾದಲ್ಲದೆ ಲಿಂಗಸಂಬಂಧವಳವಡದು,
ಲಿಂಗಸಂಬಂಧವಳವಟ್ಟಲ್ಲದೆ ಸುಖವು ಸಾಧ್ಯವಾಗದು,
ಪರಮಸುಖ ಪರಿಣಾಮಕ್ಕೆ ಮಹಾನುಭಾವಿಗಳ ಸಂಗವೇ ಬೇಕು.
ಮಹಾನುಭಾವಿಗಳ ಸಂಗದಿಂದಲ್ಲದೆ ವಿಶ್ರಾಮವಿಲ್ಲ.
ಇಂತಪ್ಪ ಮಹಾನುಭಾವದ ಮೂರ್ತಿ
ಸಂಗನಬಸವಣ್ಣನ ಕೃಪೆಯಿಂದಲೆನಗೆ ನಿಜವು ಕಾಣಬಂದಿತ್ತು. ಇದು
ಕಾರಣ, ನಿಜಗುರು ಶಂಕರದೇವರ ಶರಣ ಪ್ರಭುದೇವರ
ಶ್ರೀಪಾದವ ಕಂಡು ನಿಶ್ಚಿಂತನಾದೆನಯ್ಯ (ಸಮಗ್ರ ವಚನ ಸಂಪುಟ
೦೬, ಶಂಕರದಾಸಿಮಯ್ಯ ವಚನ ೦೩, ಸಂ: ಡಾ.ಬಿ.ಆರ್.ಹಿರೇಮಠ)

ಬಸವಣ್ಣನ ಕೃಪೆ, ಪ್ರಭುದೇವರ ಶ್ರೀಪಾದದಿಂದ ಶಂಕರದಾಸಿಮಯ್ಯನು ನಿಶ್ಚಿಂತನಾಗುವ ಬಗೆಯನ್ನು ನೋಡಬಹುದು. ಪಂಚವಿಷಯಗಳು ಮೀರಿ ಮಹಾನುಭಾವಿಯಾಗಲಿಕ್ಕೆ ಕಾರಣವಾಗುವ ಸಂಗತಿಗಳನ್ನು ಸರಪಳಿ ರೂಪದಲ್ಲಿ ಹೆಣೆಯಲಾಗಿದೆ. ಒಂದರ ಸಂಬಂಧ ಮತ್ತೊಂದರಲ್ಲಿ, ಅದರ ಸಂಬಂಧ ಎರಡನೆಯ, ಮೂರರಲ್ಲಿ ಕಾಣಬಹುದು. ಅವುಗಳನ್ನು ಬಿಡಿಸಿ ತನಗಂಟಿದ ಕರ್ಮಗಳನ್ನು ಕಿತ್ತೊಗೆದು ಸದ್ಭಕ್ತರ, ಸತ್‌ಶರಣರ ಸಂಗದಿಂದ ನಿಜವನ್ನು ಕಾಣುವ, ಮುಟ್ಟುವ ಅವಸ್ಥೆಯನ್ನು ಇಲ್ಲಿ ಗಮನಿಸಬಹುದು.

- **ಕಾಯದ ಮದವಳಿದಲ್ಲದೆ ಮಾಯಾವಿಕಾರವಳಿಯದು**

ಶರಣಮಾರ್ಗದಲ್ಲಿ ನಡೆವವನಿಗೆ ಮೊದಲು ಎದುರಾಗುವ ಪ್ರಶ್ನೆಯೆಂದರೆ ಕಾಯದ ವಿಕಾರಗಳು. ಅವುಗಳ ಪರಿಚಯವಿಲ್ಲದೆ ಮಾಯೆಯ ಮುಸುಕಿನಿಂದ ಹೊರಬರಲು ಸಾಧ್ಯವಿಲ್ಲ. ಆದ್ದರಿಂದಲೇ ೧೨೬ ವಚನಕಾರರು ೧೮೭೭ವಚನಗಳಲ್ಲಿ ಕಾಯದ ಕುರಿತು ಚಿಂತನೆ ನಡೆಸಿದ್ದಾರೆ. ಇದಕ್ಕೆ ಶಂಕರದಾಸಿಮಯ್ಯ ಹೊರತಾಗಿಲ್ಲ. ಕಾಯವಿಡಿದು ಅಕಾಯವಾಗಬೇಕು, ಮಹಾನುಭಾವಿಗಳ ಸಂಗದಿಂದ ಪರಮಸುಖವನ್ನು ಪಡೆಯಬೇಕೆಂಬುದೇ ಜೀವನದ ಮರ್ಮ. ಕಾಯದಲ್ಲಿಯ ಅಹಂಕಾರ ಕಳೆಯಲು ಕಾಯದ ವರ್ತನೆ, ನಡಾವಳಿ, ಸ್ಪಂದನೆ, ತುಡಿತ – ಮಿಡಿತಗಳ ಪರಿಚಯ ಮಾಡಿಕೊಳ್ಳುವುದು ಉತ್ತಮ. ಕಾಯದ ಮೇಲಿನ ಮೋಹ, ಮಮಕಾರಗಳನ್ನು ಅಳಿಸಿ ಸಮರ್ಪಣ ಭಾವ ಬರಬೇಕು. ಮೂಲಭಾವದಿಂದ ಪ್ರತ್ಯೇಕಗೊಂಡ ಕಾಯಗುಣಗಳು ಕರಗಿ ಪರಮಭಾವಕ್ಕೆ ಮುಟ್ಟಿಸುವ ಕಾರ್ಯ ಮಾಡಬೇಕು. ಗುರು, ಲಿಂಗ, ಜಂಗಮಕ್ಕೆ ಅರ್ಥ, ಪ್ರಾಣ, ಅಭಿಮಾನವನ್ನು ನೀಡುವುದರ ಮೂಲಕ ಅಹಂ ಕಳೆದು, ಸೋಹಂ – ದಾಸೋಹಂ ಅಳವಡಿಸಿಕೊಳ್ಳಬೇಕು. ಅಂತಹ ಕಾಯ ಶುದ್ಧವಾಗುತ್ತದೆ. ಜೇಡರದಾಸಿಮಯ್ಯ ಒಂದೆಡೆ ;

ಕಾಯ ನಿಮ್ಮ ದಾನ ; ಜೀವ ನಿಮ್ಮ ದಾನ
ಕಾಯ ಜೀವ ಉಳ್ಳಲ್ಲಿಯೇ ನಿಮ್ಮ ಪೂಜಿಸದ
ನಾಯಿಗಳನೇನೆಂಬೆ ಹೇಳ? ರಾಮನಾಥ
(ಸ.ವ.ಸಂ.೦೭, ಸಂ: ಡಾ.ಎಸ್.ವಿದ್ಯಾಶಂಕರ)

ಸರ್ವವೂ ನಿನ್ನದೆನ್ನುವ ಭಾವ. ಕಾಯದ ಜೀವದ ಸಾರ್ಥಕತೆಯಿರುವುದು ಪೂಜೆಯಲ್ಲಿ. ಕಾಯದಿಂದ ಜೀವ, ಜೀವದಿಂದ ಮನ, ಮನದಿಂದ ಭಾವ, ಭಾವದಿಂದ ಆಶೆ, ಆಶೆಯಿಂದ ದುಃಖ, ದುಃಖದಿಂದ ಕಾಯವಿಕಾರಗಳು. ಹೀಗೆ ಒಂದರ ಜೊತೆಗೆ ಹನ್ನೊಂದು ಬಂದು ಸೇರುತ್ತವೆ. ಅವುಗಳ ತಡೆಯೇ ಜೀವನದ ಪರಮರಹಸ್ಯ.

ಕಾಯವಿಕಾರ ಕಾಡಿಹುದಯ್ಯ
ಮನೋವಿಕಾರ ಕೂಡಿಹುದಯ್ಯ
ಇಂದ್ರಿಯವಿಕಾರ ಸುಳಿವುದಯ್ಯ
(ಸ.ವ.ಸಂ. ೦೧, ಸಂ: ಡಾ.ಎಂ.ಎಂ. ಕಲಬುರ್ಗಿ)

ಕಾಯದಿಂದ ಮನ, ಮನದಿಂದ ಇಂದ್ರಿಯ, ಇಂದ್ರಿಯಂಗಳಿಂದ ವಿಕಾರಗಳು ಬೆನ್ನುಹತ್ತಿ ಬರುವವು. ಈ ವಿಕಾರಗಳಿಗೆ ದಿವ್ಯೌಷಧಿಯೆಂದರೆ ಸಮತೆ, ಜ್ಞಾನ, ಮತಿ. ಇವುಗಳ ಅಳವಡದ ಹೊರತು ಮಾಯೆ ಮಸಕಾಗದು. ಕಾಯದ, ಜೀವದ, ಮನದ ಲಜ್ಜೆ ಅಲ್ಲದೆ ಕಾಯದ ಕತ್ತಲೆ, ಜೀವದ ನಿಲವ, ಭಾವದ ಸೂತಕಗಳು ತನಗೆ ಕಾಡುತ್ತಿವೆಯೆಂಬುದು ಬಸವಣ್ಣನವರ ಅಭಿಪ್ರಾಯ. ಕಾಯದ ಕಳವಳಗಳನ್ನು ಹತ್ತಿಕ್ಕದೆ ಸಾಧನೆಗೆ ಯಾವುದೇ ಅರ್ಥವಿರದು. ಅವುಗಳ ನಿಯಂತ್ರಣ ನನ್ನ ಜವಾಬ್ದಾರಿಯಷ್ಟೇ ಅಲ್ಲ, ಅದು ನಿನ್ನ ಧರ್ಮವೆಂದು ಚನ್ನಮಲ್ಲಿಕಾರ್ಜುನನಲ್ಲಿ ಬೇಡಿಕೊಳ್ಳುತ್ತಾಳೆ ಮಹಾದೇವಿಯಕ್ಕ.

ಎನ್ನ ಮಾಯದ ಮದವ ಮುರಿಯಯ್ಯ
ಎನ್ನ ಕಾಯದ ಕತ್ತಲೆಯ ಕಳೆಯಯ್ಯ
ಎನ್ನ ಜೀವದ ಜಂಜಡವ ಮಾಣಿಸಯ್ಯ
ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯ,
ಎನ್ನ ಸುತ್ತಿದ ಪ್ರಪಂಚವ ಬಿಡಿಸಾ ನಿಮ್ಮ ಧರ್ಮ
(ಸ.ವ.ಸಂ. ೦೫, ಸಂ: ಡಾ.ವೀರಣ್ಣ ರಾಜೂರ)

ತನಗೆ ಸುತ್ತಿರುವ ಸಂಸಾರ, ಪ್ರಪಂಚದ ಸಂಗತಿಗಳನ್ನು ಬಿಡಿಸುವ ಕಾರ್ಯ ನಿನ್ನದು. ನೆನೆಯುವ ಕಾರ್ಯ ನನ್ನದು ಎನ್ನುವಂತಿದೆ ಮಹಾದೇವಿಯ್ಯಕ್ಕನ ವಚನ. ‘ಎನ್ನ ಕಾಯ ಮಣ್ಣು, ಜೀವ ಬಯಲು ಆವುದು ಹಿಡಿವೆನಯ್ಯ’, ‘ಕಾಯ ಮೀಸಲಾಗಿ ನಿನಗರ್ಪಿತವಾಯಿತ್ತು’ ಎಂಬ್ಥೇಳುವ ಸಾಲುಗಳು ಎಲ್ಲವೂ ನಿನಗೆ ನೀಡಿದಾಗ, ನನ್ನದೆಂಬುದು ಉಳಿಯದು. ಹಾಗಾಗಿ ಅವುಗಳ ಮೇಲಿನ ಮೋಹ ತಾನಾಗಿಯೇ ಅಳಿವುದು ಎಂಬ ದಿವ್ಯಭಾವ ಇಲ್ಲಿದೆ. ಇದಕ್ಕೆ ಪೂರಕವಾಗಿ ಅಲ್ಲಂ ಪ್ರಭುದೇವರು ;

ಕಾಯವುಳ್ಳನ್ನಕ್ಕ ಶರಣರ ಸಂಗದಿಂದ ಅರಿಯಬೇಕು
ಜೀವವುಳ್ಳನ್ನಕ್ಕ ಅರಿವಿನ ಮುಖದಿಂದ ಹರಿಯಬೇಕು

ಈ ಎರಡು ಸಾಲಗಳಲ್ಲಿ ನೇರವಾದ ಮಾತುಗಳಲ್ಲಿ ಉತ್ತರಿಸಿದ್ದು ಪ್ರಭುದೇವ. ಸುತ್ತಿ ಬಳಸಿ ಮಾತನಾಡುವ ಗೊಡವೆ ಪ್ರಭುದೇವನಿಗಿಲ್ಲ. ಶರಣರ ಸಂಗ, ಆ ಸಂಗದಿಂದ ಅರಿವು ಸಾಧ್ಯಮಾಡಿಕೊಂಡರೆ ಕಾಡುವ ಸಂಗತಿಗಳಿಗೆ ಎಡೆಯಿಲ್ಲ. ಮಹಾಘನದ ನೆನವುಗಳು ಚಿತ್ತ, ಇಂದ್ರಿಯ, ಮನದಲ್ಲಿ ನೆಟ್ಟಾಗ ಉದ್ದೇಶಿತ ಗುರಿಯು ಸರಳವಾಗಿ ಮುಟ್ಟಬಹುದು ;

ಕಾಯದೊಳಗೆ ಅಕಾಯವಾಯಿತ್ತು
ಜೀವದೊಳಗೆ ನಿರ್ಜೀವವಾಯಿತ್ತು
ಭಾವದೊಳಗೆ ನಿರ್ಭಾವವಾಯಿತ್ತು
ಎನ್ನ ಮನದೊಳಗೆ ಘನ ನೆನಹಾಯಿತ್ತು . . . (ಸ.ವ.ಸಂ. ೦೫)

- **ಮಾಯಾವಿಕಾರವಳಿದಲ್ಲದೆ ಭವನಾಶವಾಗದು**

ಭವಿತನದ ಸಂಗತಿಯನ್ನು ಅಳಿಯಬೇಕಾದರೆ ಮಾಯೆಯ ವಿಕೃತರೂಪಗಳನ್ನು ಕೊನೆಗಾಣಿಸಬೇಕು. ಭಕ್ತ ಹಾಗೂ ಭವಿ ಎಂಬ ಎರಡು ಭೇದಗಳು ಶರಣರಲ್ಲಿದೆ. ಭವಿತನವನ್ನು ಕಳೆದು ಭಕ್ತನಾದವನು ಸಾಧನಾಮಾರ್ಗದಲ್ಲಿ ತೊಡಗುತ್ತಾನೆ. ಭವಿತನಕ್ಕೆ ಕಾರಣವಾಗುವ ಸಂಗತಿಗಳ ಬಗೆಗೆ ಜೇಡರದಾಸಿಮಯ್ಯ ;

ದಾಸಿ ವೇಶಿ ಮದ್ದು ಮೌಂಸ ಸುರೆ ಭಂಗಿ ಹೊಗೆ
ಅನ್ಯದೈವ ಭವಿಸಂಗ ಇಷ್ಟುಳ್ಳನ್ನಕ್ಕರ ಅವ ಭಕ್ತನಲ್ಲ, ಜಂಗಮನಲ್ಲ
ಅವರಿಬ್ಬರ ವೇಳಾಟವೆಂತೆಂದಡೆ
ಹೀಹಂದಿ ಹಡಿಕೆಯ ತಿಂದು
ಅವು ಒಂದರ ಮೋರೆಯನೊಂದು
ಮೂಸಿದಂತೆ ಕಾಣಾ! ರಾಮನಾಥಾ
(ಸ.ವ.ಸಂ. ೦೭, ಸಂ: ಡಾ.ಎಸ್.ವಿದ್ಯಾಶಂಕರ)

ಭಕ್ತ ಹಾಗೂ ಜಂಗನಾದವನು ಭವಿಯ ಸಂಗ, ಅನ್ಯದೈವ, ಹೊಗೆ, ಭಂಗಿ, ಸುರೆ, ಮೌಂಸ, ಮದ್ದು, ವೇಶಿ, ದಾಸಿಯಿಂದ ದೂರವಿರುವುದು ನೈತಿಕತೆ. 'ಗಂಡ ಭಕ್ತನಾಗಿ ಹೆಂಡತಿ ಭವಿಯಾದರೆ'(ಸ.ವ.ಸಂ.೦೭) ಬದುಕಿನಲ್ಲಿ ಸಮರತಿ, ಸಮಭಾವ, ಸಮರಸಗಳಿರುವುದಿಲ್ಲ. ಭವಿತನವನ್ನು ಉತ್ತೇಜಿಸುವ ಸಂಗತಿಗಳನ್ನು ಬಿಟ್ಟು ಮಾಯೆಯ ವಿಕಾರಗಳನ್ನು ಸರಿಸಿಬಿಡುವುದು ಶರಣಧರ್ಮದ ಧ್ಯೇಯವಾಗಿದೆ. ಅಂತಲೇ ಮಹಾದೇವಿಯಕ್ಕ ಒಂದು ವಚನದಲ್ಲಿ ;

ನಾ ಹುಟ್ಟಿದಲ್ಲಿ ಸಂಸಾರ ಹುಟ್ಟಿತ್ತು
ಸಂಸಾರ ಹುಟ್ಟಿದಲ್ಲಿ ಅಜ್ಞಾನ ಹುಟ್ಟಿತ್ತು
ಅಜ್ಞಾನ ಹುಟ್ಟಿದಲ್ಲಿ ಆಶೆ ಹುಟ್ಟಿತ್ತು
ಆಶೆ ಹುಟ್ಟಿದಲ್ಲಿ ಕೋಪ ಹುಟ್ಟಿತ್ತು ಆ
ಕೋಪಾಗ್ನಿ ತಾಮಸಧೂಮ್ರ ಮುಸುಕಿನಲ್ಲಿ ನಾ ನಿಮ್ಮ
ಮರೆದು ಭವ ದುಃಖಕ್ಕೀಡಾದೆ (ಸ.ವ.ಸಂ. ೦೫, ಸಂ: ಡಾ.
ವೀರಣ್ಣ ರಾಜೂರ)

ಮನುಷ್ಯನ ಹುಟ್ಟು, ಹುಟ್ಟುವಿಕೆಯೊಂದಿಗೆ ಕಾಯ, ಕಾಯದೊಂದಿಗೆ ಸಂಸಾರ, ಅಜ್ಞಾನ, ಆಶೆ, ಕೋಪಗಳೆಲ್ಲವೂ ಬೆನ್ನು ಹತ್ತಿ ಬರುವವು. ಇವೆಲ್ಲ ಮರೆವಿಗೆ ಕಾರಣ. ಭವಗೆಡುವುದು, ಹುಟ್ಟುಗೆಡುವುದರಿಂದ ಪರಮ ಆತ್ಮದೊಂದಿಗೆ ಸಹಚರತ್ವ ನಿರ್ಮಾಣವಾಗಿ ಅಖಂಡಜ್ಞಾನಕ್ಕೆ ಸನಿಹವಾಗುವುದು ಆತ್ಮ. ಹೀಗಾಗಿಯೇ ಮಹಾದೇವಿಯಕ್ಕ ತನ್ನೊಂದು ವಚನದಲ್ಲಿ 'ಎನಗುಳ್ಳದೊಂದು ಮನ, ಆ ಮನವು ನಿಮ್ಮಲ್ಲಿರ್ದ ಬಳಿಕ ಎನಗೆ ಭವದ ಭಯವುಂಟೇ?' ಎಂದು ಪ್ರಶ್ನಿಸುತ್ತಾಳೆ. ಮನವೇ ಬಂಧನಕ್ಕೂ ಬಿಡುಗಡೆಗೆ ಕಾರಣವೆಂಬುದುನ್ನು ಅರಿತ ಮಹಾದೇವಿ ತನ್ನ ಮನಸ್ಸನ್ನು ಚನ್ನಮಲ್ಲಿಕಾರ್ಜುನನಲ್ಲಿ ಇರಿಸಿ ಮಹದಾನಂದ ಸ್ಥಿತಿಯನ್ನು ಪಡೆಯುತ್ತಾಳೆ.

- **ಭವನಾಶವಾದಲ್ಲದೆ ಲಿಂಗಸಂಬಂಧವಳವಡದು**

ಭವಿತನದ ನಾಶವೇ ಲಿಂಗಸಂಬಂಧಕ್ಕೆ ಎಡೆಮಾಡಿಕೊಡುವುದು. ಅಂಗದ ಗುಣ, ಸ್ವಭಾವ, ಶೀಲಗಳನ್ನು ಮೀರಿ ಬೆಳೆದು ನಿಂತಾಗ ಲಿಂಗ ಸ್ಥಿತಿಯ ಪರಿಚಯವಾಗುತ್ತದೆ ಹಾಗೂ ಲಿಂಗ ಗುಣಗಳು ಅಳವಟ್ಟು ಬದುಕು ಇನ್ನಷ್ಟು ಅರ್ಥವಾಗುತ್ತದೆ. ಗುರುಭಕ್ತಿಯಿಂದ ಘಟಧರ್ಮವಳಿದು, ಲಿಂಗ ಭಕ್ತಿಯಿಂದ ಮನಸ್ಸಿನ ಚಂಚಲ ನಿಂದು, ಜಂಗಮ ಪ್ರೇಮದಿಂದ ಧನದ ಆಶೆಯನು ಮೀರಿದವಗೆ ನಿಜವಾದ ಮುಕ್ತಿಯ ಮಾರ್ಗ ತೆರಯುವುದೆಂದು ಜೇಡರದಾಸಿಮಯ್ಯ ನುಡಿಯುತ್ತಾನೆ;

. . . . . . ತ್ರಿವಿಧಾಂಗ ಸಲೆಸಂದು ತ್ರಿಕರಣ ಶುದ್ಧವಾಗಿದ್ದವಂಗೆ
ಮರ್ತ್ಯ ಕೈಲಾಸವೆಂಬ ಕಾಳುಮಾತಿಲ್ಲ
ಆತ ನಿಶ್ಚಿಂತ ನಿಜಮುಕ್ತನಯ್ಯ, ರಾಮನಾಥ
(ಸ.ವ.ಸಂ. ೦೫, ಸಂ: ಡಾ.ಬಿ.ಆರ್.ಹಿರೇಮಠ)

ತನು, ಮನ, ಧನಗಳನ್ನು ಒಂದುಮಾಡಿ, ಕಟ್ಟು ಕಟ್ಟಿ ತ್ರಿವಿಧಕ್ಕೆ ಹಂಚಿ ನಿಶ್ಚಿಂತನಾಗುವ ತತ್ವ ಇಲ್ಲಿದೆ. ಅದೇ ನಿಜವಾದ ಮುಕ್ತಿಗೆ ಸೋಪಾನವೂ ಹೌದು. ಇಂತಹ ಸ್ಥಿತಿವಂತರಿಗೆ ಸ್ವರ್ಗ–ಮರ್ತ್ಯದ ಭೇದಗಳಿಲ್ಲ. ಇರುವ ತಾಣವೆಲ್ಲ ಸ್ವರ್ಗ ಮಾಡುವ ಪ್ರವೃತ್ತಿ ಶರಣ ಧರ್ಮದಲ್ಲಿದೆ. ಹಾಗಾದರೆ ಭಕ್ತನು ಶರಣಸ್ಥಲಕ್ಕೆ ಮುಟ್ಟಿ ಎತ್ತರದ ಶಿಖರದಲ್ಲಿರುವವನು. ಶರಣನೆಂದರೆ ಯಾರು? ಎಂಬ ಪ್ರಶ್ನೆಗೆ ಪ್ರಭುದೇವ ಮಾರ್ಮಿಕವಾಗಿ ತನ್ನೊಂದು ವಚನದಲ್ಲಿ ಉತ್ತರಿಸಿದ್ದಾನೆ.
ನಾ, ನೀ ಎಂಬ ಭೇದ ಅಂದೂ ಇಲ್ಲ, ಇಂದೂ ಇಲ್ಲ

ಸಾಲೋಕ್ಯನಲ್ಲ ಸಾಮಿಪ್ಯನಲ್ಲ ಶರಣ
ಸಾರೂಪ್ಯನಲ್ಲ ಸಾಯುಜ್ಯನಲ್ಲ ಶರಣ
ಕಾಯನಲ್ಲ ಅಕಾಯನಲ್ಲ
ಗುಹೇಶ್ವರ ಲಿಂಗತಾನಾಗಿ . . . (ಸ.ವ.ಸಂ. ೦೨)

ಕಾಯಗೊಂಡ ಮನುಷ್ಯ ಭಕ್ತನಾಗಿ, ಶರಣನಾಗಿ ಕೊನೆಗೆ ಗುಹೇಶ್ವರನೇ ತಾನಾಗಿ ಎಂಬ ಸ್ಥಿತಿಗೆ ತಲುಪುವುದನ್ನು ಇಲ್ಲಿ ಗಮನಿಸಬಹುದು. ಎರಡಳಿದು ಒಂದಾಗುವ ಪ್ರಕ್ರಿಯೆ ಇಲ್ಲಿದೆ. ನಾನು – ನೀನು, ಕಾಯ – ಅಕಾಯಗಳೆಲ್ಲ ಪ್ರಕೃತಿಯ ಚಿತ್ಶಕ್ತಿಗಳಲ್ಲಿ ಅಡಗುವ ಅಥವಾ ಚಿತ್ಶಕ್ತಿಯೇ ಜೀವದಲ್ಲಿ ತನ್ಮೇಳಗೊಳ್ಳುವ ಪರಿಯನ್ನು ನೋಡಬಹುದು. ಇಂತಹ ಸಂಬಂಧ ಅಳವಟ್ಟಾಗ ಪಡುವ ಸುಖವು ಪರಮಸುಖವಾಗಿರುವುದು.

- **ಲಿಂಗಸಂಬಂಧವಳವಟ್ಟಲ್ಲದೆ ಸುಖವು ಸಾಧ್ಯವಾಗದು**

ಜೀವದ ಪರಮಗುರಿ ಸುಖ. ಅದು ಅಂತಿಂಥ ಸುಖವಲ್ಲ. ಇದರ ಸವಿಯುಂಡವನಿಗೆ ಮತ್ತಾವುದರ ಬಯಕೆಗಳಿರುವುದಿಲ್ಲ. ಅಂತಹ ಮಹಾನುಭಾವರನ್ನು ಎನಗೆ ತೋರು ಎಂದು ಬಸವಣ್ಣ ಬಿನ್ನವಿಸಿಕೊಳ್ಳುತ್ತಾರೆ;

ಪರಮತತ್ವದ ನಿಜ ಸಂಯುಕ್ತರ ಆನು
ನೀನೆಂಬ ಶಬ್ದಸುಖಗಳ ತೋರಾ ಎನಗೆ ಮಹಾನುಭಾವರ
ತೋರಾ ಎನಗೆ ಲಿಂಗೈಕ್ಯರ, ಲಿಂಗಸುಖಿಗಳ,
ಲಿಂಗಗೂಡಾಗಿಪ್ಪರ ಲಿಂಗಾಭಿಮಾನಿಗಳ ತೋರಾ ಎನಗೆ
ಅಹೋರಾತ್ರಿ ನಿಮ್ಮ ಶರಣರ ಸೇವೆಯಲ್ಲಿರಿಸು ಕೂಡಲಸಂಗಮದೇವಾ (ಸ.ವ.ಸಂ.೦೧)

ಬಯಕೆಗಳೆಲ್ಲ ತನು ಮನದಿಂದ ಮೀರಿ, ಆತ್ಮ ಸುಖದೆಡೆಗೆ ಸಾಗುವ ಪರಿ ಇಲ್ಲಿದೆ. ಮಾಡುವ ಕ್ರಿಯೆಗಳೆಲ್ಲ ಲಿಂಗ ಮೆಚ್ಚಿ ಅಹುದಹುದೆಂಬುದೆಡೆ ತುಡಿವ ಪ್ರಕ್ರಿಯೆಯನ್ನು ಇಲ್ಲಿ ನೋಡುತ್ತೇವೆ. ಇಲ್ಲಿ ಪಡೆವ, ಅನುಭವಿಸುವ ಸುಖಗಳೆಲ್ಲವೂ ಅಪರಿಮಿತವಾದುದು, ಅಲೌಕಿಕವಾದುದು.

- **ಪರಮಸುಖ ಪರಿಣಾಮಕ್ಕೆ ಮಹಾನುಭಾವಿಗಳ ಸಂಗವೇ ಬೇಕು**

ಅನುಭವಗಳೆಲ್ಲ ಅನುಭಾವಗಳಾಗಿ, ಸುಖಗಳೆಲ್ಲ ಪರಮಸುಖವಾಗಿ ಮಾರ್ಪಡುವ ಹಂತವನ್ನು ಇಲ್ಲಿ ಗಮನಿಸಬಹುದು. ಸಹಜವಾದ ಸಂಗತಿಯಿಂದ ಮೇಲೆ ಬಂದು ಅದ್ವಿತೀಯ ಹಂತಕ್ಕೆ ತಲುಪಿದಾಗಲೇ ಮಹಾನ್ ಸ್ಥಿತಿಯ ಪರಿಚಯವಾಗುತ್ತದೆ. ಮಹಾದೇವಿಯಕ್ಕಳು –'ನಿಮ್ಮ ಮಹಾನುಭಾವಿಗಳ ಸಂಗದಿಂದಲಾನು ಪರಮಸುಖಿಯಾದೆನಯ್ಯ'(ಸ.ವ.ಸಂ. ೦೫) ಎಂದು ಹೇಳುತ್ತಾಳೆ. ಅಲ್ಲದೆ ಬಸವಣ್ಣ –'ಮಹಾನುಭಾವರ ಸಂಗದಿಂದ ಜ್ಞಾನಾಗ್ನಿ ಹುಟ್ಟಿ, ಎನ್ನ ತನು ಗುಣವೆಲ್ಲವ ಸುಡದಿಪ್ಪುದೆ' ಎಂದು ನುಡಿಯುತ್ತಾರೆ. ಶರಣರ ಸಂಗಮಾತ್ರದಿಂದ ಇಹದ ಸೋಂಕು ಇಲ್ಲವಾಗಿ ಪರದ, ಪರಮಾತ್ಮನ ಅನುಭೂತಿಯೂ ಆಗುವುದು. ಮಹಾನುಭಾವಿಗಳ ಜೊತೆ ಬೆರೆಯುವಿಕೆಯಿಂದ ಆಗುವ ಪ್ರಯೋಜನಗಳ ಕುರಿತು ಬಸವಣ್ಣ ;

ಅಯ್ಯಾ ಸಜ್ಜನ, ಸದ್ಭಾವರ ಸಂಗದಿಂದ
ಮಹಾನುಭಾವರ ಕಾಣಬಹುದಯ್ಯ
ಮಹಾನುಭಾವರ ಸಂಗದಿಂದ ಶ್ರೀಗುರುವನರಿಯಬಹುದು
ಲಿಂಗವನರಿಯಬಹುದು, ಜಂಗಮವನರಿಯಬಹುದು
ಪ್ರಸಾದವನರಿಯಬಹುದು, ತನ್ನ ತಾನರಿಯಬಹುದು ಇದು
ಕಾರಣ ಸದ್ಭಕ್ತರ ಸಂಗವನೆ ಕರುಣಿಸು
ಕೂಡಲಸಂಗಮದೇವಾ ನಿಮ್ಮ ಧರ್ಮ (ಸ.ವ.ಸಂ. ೦೧)

ತನ್ನ ತಾನು ಅರಿವ ಮೆಟ್ಟಿಲೆಂದರೆ ಸಜ್ಜನ, ಸದ್ಭಾವರ ಸಂಗ. ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಎಲ್ಲ ಶರಣರು ನೀಡಿದ್ದಾರೆ. ಮೊದಲ ವಚನಕಾರನಾದ ಜೇಡರದಾಸಿಮಯ್ಯನು 'ನಿಮ್ಮ ಶರಣರ ಸೂಳ್ನುಡಿ ಒಂದರಗಳಿಗೆ ಇತ್ತರೆ ಸಾಕು' ಎನ್ನುತ್ತಾನೆ. ಕರಿ, ಸಿರಿ, ಹಿರಿದಪ್ಪ ರಾಜ್ಯಗಳೆಲ್ಲವೂ ಭೌತಿಕತೆಯನ್ನು ಪ್ರತಿಪಾದಿಸುತ್ತವೆ. ಆದ್ದರಿಂದ ಅವುಗಳ ತ್ಯಜಿಸಿ ರಾಮನಾಥನ ನಿತ್ತೆ ಆಗುವಂತಹ ಶರಣರ ನುಡಿಗಡಣಗಳಿಗೆ ಮಾರುಹೋಗಿದ್ದಾರೆ. ಬಸವಣ್ಣನು ಸಜ್ಜನರ ಸಂಗದಿಂದ ಶ್ರೀಗುರು, ಲಿಂಗ, ಜಂಗಮ, ಪ್ರಸಾದವನ್ನು ಅರಿಯಬೇಕೆಂದು ಹೇಳಿದ್ದಾನೆ. ಎಲ್ಲ ಕಾರ್ಯಕ್ಕೂ ಕಾರಣವಾಗುವ ಪರಿಸರ ಬಹು ಮುಖ್ಯ. ಪರಿಸರದ ಪ್ರಭಾವ, ಪ್ರೇರಣೆಯಿಂದಲೇ ಶರಣ ರೂಪುಗೊಳ್ಳುತ್ತಾನೆ. ಸಂಗದ ಕಾರಣಕ್ಕಾಗಿ ಶಕ್ತಿಯ ನಿರ್ಮಾಣ, ಪರಿಣಾಮದ ನಿರ್ಮಿತಿ ಆಗುತ್ತದೆ. ಆ ತದ್‌ಪರಿಣಾಮವೇ ಅನನ್ಯ ಶಕ್ತಿಯಾಗಿ ಗೋಚರಿಸುತ್ತದೆ. ಇಂಥ ಸಾಧನೆಯ ಸಿದ್ಧಿಯ ಹಂತ ತಲುಪಿದಾಗ ಅಲ್ಲಿ ಯಾವುದು ಇಲ್ಲ, ಏನೂ ಇಲ್ಲ, ಎಲ್ಲವೂ ಶೂನ್ಯ, ಬರೀ ಶೂನ್ಯ. ಈ ಅರ್ಥ ಸ್ಫುರಿಸುವ ಇನ್ನೊಂದು ವಚನ ಶಂಕರದಾಸಿಮಯ್ಯನಲ್ಲಿದೆ;

ಕಾಯವಿಲ್ಲಾಗಿ ಮಾಯವಿಲ್ಲ
ಮಾಯವಿಲ್ಲಾಗಿ ಮಥನವಿಲ್ಲ
ಮಥನವಿಲ್ಲಾಗಿ ಭಾವವಿಲ್ಲ
ಬಾವವಿಲ್ಲಾಗಿ ಬಯಕೆಯಿಲ್ಲ
ಬಯಕೆಯಿಲ್ಲಾಗಿ ನಿರ್ಭಾವ ನಿಜವನೈದಿ
ನಿಜಗುರು ಶಂಕರದೇವರೆಂಬುದು ತಾನಿಲ್ಲ
(ಸ.ವ.ಸಂ. ೦೯, ಶಂಕರದಾಸಿಮಯ್ಯನ ವಚನ – ೦೪, ಸಂ:ಡಾ.ಬಿ.ಆರ್.ಹಿರೇಮಠ)

**ಗ್ರಂಥಋಣ**


೧. ಸಮಗ್ರ ವಚನ ಸಂಪುಟ – ೦೯, ಶಂಕರದಾಸಿಮಯ್ಯಗಳ ವಚನಗಳು. ಸಂ: ಡಾ.ಬಿ.ಆರ್.ಹಿರೇಮಠ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩
೨. ಸಮಗ್ರ ವಚನ ಸಂಪುಟ – ೦೧,೦೨,೦೫,೦೭,೦೯,೧೦,೧೨ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು,೧೯೯೩
೩. ವೀರಶೈವ ಸಾಹಿತ್ಯ ಚರಿತ್ರೆ – ಸಂಪುಟ ೦೧, ವಚನ ಸಾಹಿತ್ಯ, ಡಾ.ಎಸ್.ವಿದ್ಯಾಶಂಕರ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು ೨೦೦೩
೪. ನೂತನ ಪುರಾತನರ ರಗಳೆಗಳು – ಸಂ: ಡಾ.ಎಂ.ಎಸ್.ಸುಂಕಾಪುರ,ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,೧೯೭೬.